ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮಂತ್ರಿಯವರು)

ಎ) ಐ.ಎ.ಎಸ್. — ೨೪೨
ಐ.ಪಿ.ಎಸ್. — ೧೦೮
ಐ.ಎಫ್.ಎಸ್. — ೧೦೮

ಬಿ) ಐ.ಎ.ಎಸ್. — ೦೪
ಐ.ಪಿ. ಸ್. — —
ಐ.ಎಫ್.ಎಸ್. — ೦೧

ಸಿ) ಕಾನೂನು ಉಲ್ಲಂಘಿಸಿದ ಯಾವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಡಿ) ಉಪ ಪ್ರಶ್ನೆ (ಸಿ)ಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಭೆಯ ಮುಂದಿಡಲಾದ ಕಾಗದಪತ್ರಗಳು

I ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯ ಮಂತ್ರಿಯವರು).—ಅಧ್ಯಕ್ಷರೆ,ನಾನು ಈ ಕೆಳಗಿನ ಕಾಗದ ಪತ್ರಗಳನ್ನು ಸಭೆಯಮುಂದೆ ಮಂಡಿಸುತ್ತೇನೆ.

೧೯೫೨ನೇ ಇಸವಿಯ ಕರ್ನಾಟಕ ಪುರಾಣ ತೆರಿಗೆ ಶಾಸನದ ೮ (ಎ)ನ ಕಲಮಿನ ಮೇರೆಗೆ :

೧) ಗೊಬ್ಬರ ಕಾರ್ಖಾನೆಗಳು ಡೈಅಮೋನಿಯಂ ಫಾಸ್ಫೇಟ್ ಉತ್ಪಾದಿಸಲು ಉಪಯೋಗಿಸುವ ಸಾಧನ ಸಾಮಗ್ರಿಗಳನ್ನು ಪುರಾಣ ಮಾಡುವಾಗ ನೀಡಬೇಕಾದ ತೆರಿಗೆಯನ್ನು ವಿನಾಯಿತಿಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೧೯೮೮ನೇ ಮಾರ್ಚ್ ೨೦ರಂದು ಹೊರಡಿಸಲಾದ ಎಫ್.ಡಿ.೭೫ ಸಿ.ಎಸ್.ಎಲ್. ೮೮ನೇ ಕ್ರಮಾಂಕದ ಅಧಿಸೂಚನೆ.

೨) ಅಸ್ಫಾಲ್ಟಿಕ್ ಮೇಲ್ಪಾವಣಿಯನ್ನು ಪುರಾಣ ಮಾಡುವಾಗ ತೆರಿಗೆಯನ್ನು ಶೇಕಡ ಎಂಟಕ್ಕೆ ಇಳಿಸುವ ಬಗ್ಗೆ ಸಂಬಂಧಿಸಿದಂತೆ ದಿನಾಂಕ ೧೯೮೮ನೇ ಮಾರ್ಚ್ ೩೦ ರಂದು ಹೊರಡಿಸಲಾದ ಎಫ್.ಡಿ. ೮೨ ಸಿ ಎಸ್ಎಲ್ ೮೮ (೧)ನೇ ಕ್ರಮಾಂಕದ ಅಧಿಸೂಚನೆ.

೩) ಎಲೆಕ್ಟ್ರಾನಿಕ್ ಕ್ಯಾಲ್ಕ್ಯುಲೇಟರುಗಳನ್ನು ಪುರಾಣ ಮಾಡುವಾಗ ತೆರಿಗೆಯನ್ನು ಶೇಕಡ ಳಕ್ಕೆ ಇಳಿಸುವ ಬಗ್ಗೆ ಸಂಬಂಧಿಸಿದಂತೆ ದಿನಾಂಕ ೧೯೮೮ನೇ ಮಾರ್ಚ್ ೨೦ರಂದು ಹೊರಡಿಸಲಾದ ಎಫ್ಡಿ ೮೨ ಸಿ ಎಸ್ಎಲ್ ೮೮ನೇ (೨)ನೇ ಕ್ರಮಾಂಕದ ಅಧಿಸೂಚನೆ.

೪) ಮೋಟಾರು ಕಾರು ಪುರಾಣ ಮಾಡುವಾಗ ನೀಡಬೇಕಾದ ತೆರಿಗೆಯನ್ನು ವಿನಾಯಿತಿ ಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೧೯೮೮ನೇ ಮಾರ್ಚ್ ೨೦ ರಂದು ಹೊರಡಿಸಲಾದ ಎಫ್ಡಿ೩೩ ಸಿಎಸ್ಎಲ್ ೮೮ನೇ (೩)ನೇ ಕ್ರಮಾಂಕದ ಅಧಿಸೂಚನೆ,

೫) ಬಯೋ ಮಾಸ್ಗ್ಯಾಸ್, ಹಪ್ಪಳ, ಪಾಪಡಿಗಳಿಂದ ಎಳೆಯಲ್ಪಡುವ ಗಾಡಿಗಳು,ಮನುಷ್ಯರ ಕೂದಲು ಮತ್ತು ಇತರ ವಸ್ತುಗಳನ್ನು ಪುರಾಣ ಮಾಡುವಾಗ ನೀಡಬೇಕಾದ ತೆರಿಗೆಯನ್ನು ವಿನಾಯಿತಿ ಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೨೦ನೇ ಮಾರ್ಚ್ ೧೯೮೮ರಂದು ಹೊರಡಿಸಲಾದ ಎಫ್ಡಿ೮೨ ಸಿಎಸ್ಎಲ್ ೮೮(೪)ನೇ ಕ್ರಮಾಂಕದ ಅಧಿಸೂಚನೆ.

೬) ಅಧಿಸೂಚನೆ ಎಫ್ಡಿ ೧೪ ಸಿಎಸ್ಎಲ್ ೮೨ ದಿನಾಂಕ ೨೮-೨-೧೯೮೨ರಂದು ಹಿಂತೆಗೆದು ಕೊಳ್ಳುವ ಬಗ್ಗೆ ಸಂಬಂಧಿಸಿದಂತೆ ದಿನಾಂಕ ೨೦ನೇ ಮಾರ್ಚ್ ೧೯೮೮ರಂದು ಹೊರಡಿಸಲಾದ ಎಫ್ಡಿ೮೨ ಸಿಎಸ್ಎಲ್ ೮೮ (೫)ನೇ ಅಧಿಸೂಚನೆ.

೭) ಪೆಟ್ರೋಲ್, ಧಾನ್ಯಗಳು, ಹೊಲಿಗೆಯಂತ್ರ ಮತ್ತು ಇತರೆ ವಸ್ತುಗಳ ಮೇಲೆ ತೆರಿಗೆ ಕಡಿಮೆ ಮಾಡುವುದರ ಬಗ್ಗೆ ಸಂಬಂಧಿಸಿದಂತೆ ದಿನಾಂಕ ೩೦ನೇ ಮಾರ್ಚ್ ೧೯೮೮ರಂದು ಹೊರಡಿಸಲಾದ ಎಫ್ಡಿ ೮೨ ಸಿಎಸ್ಎಲ್ ೮೮ (೬)ನೇ ಅಧಿಸೂಚನೆ.

೮) ಕರ್ನಾಟಕ ಪ್ರವೇಶ ತೆರಿಗೆ ಶಾಸನದ (ತಿದ್ದುಪಡಿ) ನಿಯಮ, ೧೯೮೮ಕ್ಕೆ ಸಂಬಂಧಿಸಿದಂತೆ ದಿನಾಂಕ ೨೧ನೇ ಮಾರ್ಚ್ ೧೯೮೮ರಂದು ಹೊರಡಿಸಲಾದ ಎಫ್‌ಡಿ ೧೦೪ ಸಿಇಡಿ ೮೨ನೇ ಕ್ರಮಾಂಕದ ಅಧಿಸೂಚನೆ.

೯) ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ಅಧಿನಿಯಮಗಳು, ೧೯೮೮ಕ್ಕೆ ಸಂಬಂಧಿಸಿದಂತೆ ದಿನಾಂಕ ೧೭ನೇ ಮಾರ್ಚ್ ೧೯೮೮ರಂದು ಹೊರಡಿಸಲಾದ ಎಫ್.ಡಿ ೧೨೨ ಸಿಎಸ್‌ಎಲ್ ೮೭ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಉದ್ಯಮ ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿ).– ಈ ಕೆಳಗಿನ ಕಾಗದಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೧೯೬೮ರ ಭಾರತೀಯ ವಿದ್ಯುಚ್ಛಕ್ತಿ (ಪೂರೈಕೆ) ಅಧಿನಿಯಮದ ೬೧ನೇ ಪ್ರಕರಣದ (೩)ನೇ ಉಪ ಪ್ರಕರಣದ ಮೇರೆಗೆ :

೧) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ೧೯೮೭-೮೮ನೇ ಸಾಲಿನ ಪರಿಷ್ಕೃತವಿತ್ತ ವಿವರಣೆ ಮತ್ತು ೧೯೮೮-೮೯ನೇ ಸಾಲಿನ ವಾರ್ಷಿಕವಿತ್ತ ವಿವರಣೆಯನ್ನು, ಹಾಗೂ

೨) ೧೯೫೬ನೇ ಇಸವಿಯ ಕಂಪೆನಿಗಳ ಶಾಸನದ ೬೧೯(ಎ) ಕಲಮಿನ ಮೇರೆಗೆ :

೧೯೮೪-೮೫ನೇ ಇಸವಿಯ ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ ನಿಯಮಿತ ಮೈಸೂರು ಇವರ ೩೯ನೇ ವಾರ್ಷಿಕ ವರದಿ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿ).—ಅಧ್ಯಕ್ಷರೆ, ನಾನು ೧೯೮೧ನೇ ಇಸವಿಯ ಕರ್ನಾಟಕ ಕಾನೂನು ಸಲಹಾ ಮಂಡಳಿ ಶಾಸನದ ೨೨(೮)ನೇ ಕಲಮಿನ ಮೇರೆಗೆ : ೧೯೮೬-೮೭ನೇ ಇಸವಿಯ ಕರ್ನಾಟಕ ಕಾನೂನು ಸಲಹಾ ಮಂಡಲಿಯ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ ಚಂದ್ರಶೇಖರ್ (ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿ).—ಅಧ್ಯಕ್ಷರೇ ನಾನು ೧೯೭೩ನೇ ಇಸವಿಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಶಾಸನದ ೪೨ ೨)(ಎ) ಕಲಮಿನ ಮೇರೆಗೆ–೧೯೮೫-೮೬ನೇ ಇಸವಿಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಲೆಕ್ಕ ಪತ್ರ ಮತ್ತು ತನಿಖಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿ). — ಅಧ್ಯಕ್ಷರೆ, ನಾನು.

೧) ೧೯೫೬ನೇ ಇಸವಿಯ ಕಂಪೆನಿಗಳ ಶಾಸನದ ೬೧೯ (ಎ) ಕಲಮಿನ ಮೇರೆಗೆ, ೧೯೮೪-೮೫ನೇ ಇಸವಿಯ ಕಂಠೀರವ ಸ್ಟುಡಿಯೋದ ಲಿಮಿಟೆಡ್‌ರವರ ವಾರ್ಷಿಕ ವರದಿ, ಹಾಗೂ

೨) ೧೯೬೪ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಶಾಸನದ ೩೦ನೇ ಕಲಮಿನ ಮೇರೆಗೆ.

ಅ) ಸೋಮೇಶ್ವರ ಸಂಚಾರಿ ಚಲನಚಿತ್ರ ಮಂದಿರ ನಾಗಸಂದ್ರ ಕಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಇವರಿಗೆ ೧೯೬೪ನೇ ಇಸವಿಯ ನಿಯಮ ೧೦೫ ಉಪನಿಯಮ (೧)ರಿಂದ ವಿನಾಯಿತಿ ನೀಡುವುದರ ಬಗ್ಗೆ ದಿನಾಂಕ ೧೬-೩-೧೯೮೮ರಂದು ಹೊರಡಿಸಲಾದ ಹೆಚ್‌ಡಿ ೨೪೨ ಸಿಕಾಸಿ ೮೭ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಆ) ಸಬರೀ ಸಂಚಾರಿ ಚಲನಚಿತ್ರ ಮಂದಿರ ಚಿಕ್ಕಬ್ಯಾಣಾವರ ಬೆಂಗಳೂರು ಉತ್ತರ ಇವರಿಗೆ ೧೯೬೪ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಶಾಸನದಿಂದ ವಿನಾಯಿತಿ ನೀಡುವುದರ ಬಗ್ಗೆ ದಿನಾಂಕ ೧೬-೩-೮೮ರಂದು ಹೊರಡಿಸಲಾದ ಹೆಚ್‌ಡಿ ೩೦ಸಿಎಸ್‌ಎಲ್ ೮೭ರ ಆದೇಶವನ್ನು,

ಇ) ರಜತಾ ಸಂಚಾರಿ ಚಲನಚಿತ್ರ ಮಂದಿರ ಯ್ಯಾಟಿಗಡ್ಡಪಲ್ಲಿ, ಬಾಗೇಪಲ್ಲಿ ತಾಲ್ಲೂಕು, ಕೋಲಾರ ಜಿಲ್ಲೆ ಇವರಿಗೆ ೧೯೬೪ನೇ ಕರ್ನಾಟಕ ಸಿನಿಮಾ (ನಿಯಂತ್ರಣ) ಶಾಸನದ ಇಸವಿಯ ೧೦೫ನೇ

ನಿಯಮ (೧) ಉಪನಿಯಮದಿಂದ ವಿನಾಯಿತಿ ನೀಡುವುದರ ಬಗ್ಗೆ ದಿನಾಂಕ ೩೦-೩-೮೮ರಂದು ಹೊರಡಿಸಲಾದ ಹೆಚ್‌ಡಿ ೩೯ ಎಎಸ್‌ಎ ೮೮ರ ಆದೇಶವನ್ನು,

ಈ) ದೀಪಕ್ ಸಂಚಾರಿ ಚಲನಚಿತ್ರ ಮಂದಿರ ಬಿಡದಿ, ರಾಮನಗರಂ ತಾಲ್ಲೂಕು, ಬೆಂಗಳೂರು ಜಿಲ್ಲೆ ಇವರಿಗೆ ೧೯೬೯ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಶಾಸನದ ೧೦೫ನೇ ನಿಯಮ (೧) ಉಪನಿಯಮದಿಂದ ವಿನಾಯಿತಿ ನೀಡುವುದರ ಬಗ್ಗೆ ದಿನಾಂಕ ೩-೨-೮೮ರಂದು ಹೊರಡಿಸಲಾದ ಹೆಚ್‌ಡಿ ೧೫೫ ಸಿಎಸ್‌ಎ ೮೭ರ ಆದೇಶವನ್ನು,

ಉ) ಬೆಂಗಳೂರು ಬಿ.ಇ.ಎಲ್. ಕಲಾಕ್ಷೇತ್ರದಲ್ಲಿ ೩೫ ಎಂ.ಎಂ. ಚಲನಚಿತ್ರ ಪ್ರದರ್ಶಿಸುವ ಸಲುವಾಗಿ ವಿನಾಯಿತಿ ನೀಡುವ ಬಗ್ಗೆ ದಿನಾಂಕ ೬-೪-೮೮ರಂದು ಹೊರಡಿಸಲಾದ ಹೆಚ್‌ಡಿ ೧೦೭ ಸಿಎನ್‌ಎ ೮೭ರ ಆದೇಶವನ್ನು, ಹಾಗೂ

ಊ) ಬೆರಳ್‌ಗೆ ಕೊರಳ್ ಚಲನ ಚಿತ್ರವನ್ನು ಶಾಲಾ ಮಂತ್ರಿಕಾಲೇಜು ವಿದ್ಯಾರ್ಥಿಗಳಿಗೆ ವಿಶೇಷ ಪ್ರದರ್ಶನವನ್ನು ಪ್ರದರ್ಶಿಸುವ ಅನುಮತಿ ನೀಡಲಾಗಿ ದಿನಾಂಕ ೨೫-೩-೮೮ರಂದು ಹೊರಡಿಸಲಾದ ಹೆಚ್‌ಡಿ ೧೭ ಸಿಎನ್‌ಎ ೮೮ರ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಪಿ. ಜಿ. ಆರ್, ಸಿಂಧ್ಯ (ಸಾರಿಗೆ ಮಂತ್ರಿ).— ಅಧ್ಯಕ್ಷರೇ, ನಾನು ೧೯೫೭ನೇ ಇಸವಿಯ ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ೧೬(೨)ರ ಕಲಮಿನ ಮೇರೆಗೆ :

ಅ) ಅಣ್ಣಾ ಸಾರಿಗೆ ಸಂಸ್ಥೆ ಸೇಲಂ ಇವರಿಗೆ ಸೇರಿರುವ ೩೦ ವಾಹನಗಳಿಗೆ ಮಾಹದೇಶ್ವರ ಬೆಟ್ಟಕ್ಕೆ ಶಿವರಾತ್ರಿ, ಯುಗಾದಿ ಹಬ್ಬಗಳಲ್ಲಿ ವಿಶೇಷವಾಗಿ ಓಡಾಡಲು ಕೊಡಬೇಕಾಗಿರುವ ವಾಹನ ತೆರಿಗೆಯಿಂದ ವಿನಾಯಿತಿಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೪-೩-೮೮ರಂದು ಹೊರಡಿಸಲಾದ ಎಫ್ ಟಿ ಡಿ ೧೮ ಡಿಎಂಡಿ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು,

ಆ) ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಖಾಸಗಿ ಬಸ್ಸುಗಳನ್ನು ರಾಷ್ಟ್ರೀಕೃತ ಮಾಡಿದ ಮೇಲೆ ಸಾರಿಗೆ ತೆರಿಗೆಯನ್ನು ಕಡಿಮೆ ಮಾಡುವುದರ ಬಗ್ಗೆ ದಿನಾಂಕ ೬-೨-೮೮ರಂದು ಹೊರಡಿಸಲಾದ ಎಫ್‌ಟಿಡಿ ೪೭೧ ಟಿಎಂಟಿ ೮೫ರ ಸಂಖ್ಯೆಯ ಅಧಿಸೂಚನೆಯನ್ನು,

ಇ) ಅಧಿಸೂಚನೆ ಹೆಚ್‌ಡಿ೧೭ ಡಿಎಂಡಿ೭೭, ದಿನಾಂಕ ೧೪-೪-೧೯೭೮, ಹೆಚ್‌ಡಿ ೮೨ಡಿಎಂಟಿ೮೦, ದಿನಾಂಕ ೨೩-೪-೧೯೮೪ ಎಚ್‌ಡಿ ೪೬೫ ಟಿಎಂಟಿ ೮೦, ದಿನಾಂಕ ೨೯-೬-೧೯೮೪ ಎಫ್‌ಟಿಡಿ ೨೬ ಟಿಎಂಟಿ ೮೪(೧) ದಿನಾಂಕ ೨೯-೬-೧೯೮೪, ಎಫ್‌ಟಿಡಿ ೨೬ ಟಿಎಂಟಿ ೧೯೮೪(೨) ದಿನಾಂಕ ೨೯-೬-೧೯೮೪, ಎಫ್‌ಟಿಡಿ ೨೫೫ ಟಿಎಂಟಿ ೧೯೮೪ ದಿನಾಂಕ ೧೧-೪-೮೫, ಇವುಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ದಿನಾಂಕ ೧೮-೧-೧೯೮೮ರಂದು ಹೊರಡಿಸಲಾದ ಎಫ್‌ಟಿಡಿ ೧೮೫ ಟಿಎಂಟಿ ೮೫ನೇ ಅಧಿಸೂಚನೆಯನ್ನು,

ಈ) ಸಿಎಇ ೮೮೮೯, ಎಂಇಜಿ ೮೯೩೨, ಸಿಎಯಂ ೫೭೫೭ ಮತ್ತು ಸಿಎವಿ ೨೮೮೬ ಸಂಖ್ಯೆಯನ್ನು ಹೊಂದಿರುವ ಕಿದ್ವಾಯಿ ಮೆಮೋರಿಯಲ್‌ಇನ್ಸ್‌ಟ್ಯೂಶನ್ ಬೆಂಗಳೂರು ಇವರಿಗೆ ಸೇರಿರುವ ಮೋಟಾರು ವಾಹನಗಳಿಗೆ ತೆರಿಗೆ ವಿನಾಯಿತಿ ನೀಡುವುದರ ಬಗ್ಗೆ ದಿನಾಂಕ ೨೩-೧-೧೯೮೮ರಂದು ಹೊರಡಿಸಲಾದ ಎಫ್‌ಟಿಡಿ ೨೭೬ ಟಿಎಂಟಿ ೮೭ನೇ ಅಧಿಸೂಚನೆಯನ್ನು,

ಉ) ಅಣ್ಣಾ ಸಾರಿಗೆ ನಿಗಮಕ್ಕೆ ಸೇರಿದ ಐದು ವಾಹನಗಳಿಗೆ ಮೆಟ್ಟೂರಿನಿಂದ ಮಲೈ ಮಹದೇಶ್ವರ ಬೆಟ್ಟಕ್ಕೆ ಪಾಲಾರ್ ನದಿ ದಂಡೆಯ ಮೇಲಿಂದ ಅಮಾವಾಸ್ಯೆ ದಿನಗಳಲ್ಲಿ ಓಡಾಡಲು ತೆರಿಗೆ ವಿನಾಯಿತಿ ನೀಡಾವುದರ ಬಗ್ಗೆ ದಿನಾಂಕ ೧೩-೧-೧೯೮೮ರಂದು ಹೊರಡಿಸಲಾದ ಎಫ್‌ಟಿಡಿ ೩೪೭೭ಲೆಎಂಟಿ ೮೭ನೇ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಆರ್. ದೇಶಪಾಂಡೆ (ಕೃಷಿ ಮಂತ್ರಿ).—೧೯೫೭ನೇ ಇಸವಿಯ ಕಂಪೆನಿಗಳ ಶಾಸನದ ೬೧೯ನೇ ಕಲಮಿನ ಮೇರೆಗೆ ನಾನು,

ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಇವರ ೧೯೮೪-೮೫ನೇ ಇಸವಿಯ ೧೨ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿ).— ಅವರು ೧೯೫೯ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ ಶಾಸನದ ೧೭೯ನೇ ಕಲಮಿನ ಮೇರೆಗೆ ನಾನು,

ಶಾಸನದ ೧೯೫೯ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ ಶಾಸನದ ೩೦ (ಎ)ಕಲಮನ್ನು ಮಾರ್ಪಾಡಿನೊಂದಿಗೆ ಶಾಸನದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಅನ್ವಯಿಸುವುದರ ಬಗ್ಗೆ ದಿನಾಂಕ ೭-೩-೧೯೮೮ರಂದು ಹೊರಡಿಸಲಾದ ಸಿಎಂಡಬ್ಲ್ಯೂಸಿ ಸಿಎಲ್‌ಎಂ ೮೮ನೇ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಎಲ್ಲಾ ಕಾಗದ ಪತ್ರಗಳನ್ನೂ ಸಭೆಯ ಮುಂದಿಡಲಾಯಿತು.

ವರದಿಗಳನ್ನು ಒಪ್ಪಿಸುವುದು

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಅಧ್ಯಕ್ಷರು —ಸರ್ಕಾರಿ ಭರವಸೆಗಳ ಸಮಿತಿ).—ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರಿ ಭರವಸೆಗಳ ಸಮಿತಿಯ ೫ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಡಿ. ಟಿ. ಜಯಕುಮಾರ್ (ಅಧ್ಯಕ್ಷರು — ಅಧೀನ ಶಾಸನ ರಚನಾ ಸಮಿತಿ).—ಮಾನ್ಯ ಅಧ್ಯಕ್ಷರೇ, ಅಧೀನ ಶಾಸನ ರಚನಾ ಸಮಿತಿಯ ಏಳು, ಎಂಟು, ಒಂಬತ್ತು ಹಾಗೂ ೧೦ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನ ಸಭಾ ಕ್ಷೇತ್ರಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಸೌಲಭ್ಯ ಹಾಗೂ ಬೆಂಗಳೂರಿನಲ್ಲಿ ಸೆವಿಂ ಲಕ್ಷುರಿ ಬಸ್ಸಿಗೆ ಬುಕ್ಕಿಂಗ್ ಸೌಲಭ್ಯಕ್ಕೆ ಸಂಬಂಧಪಟ್ಟ ಮನವಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಯಿತು.

ನಿಲುವಳಿ ಸೂಚನೆ ಪ್ರಸ್ತಾವಕ್ಕೆ ಅನುಮತಿ ಕೋರಿಕೆ

ರೈತರಿಗೆ ಹತ್ತಿ ಮತ್ತಿತರ ಬೀಜಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸದೇ ಇರುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ರೈತರಿಗೆ ಸಂಬಂಧಪಟ್ಟ ವಿಚಾರದಲ್ಲಿ ನಿಲುವಳಿ ಸೂಚನೆಯನ್ನು ತವಂಗೆ ಕೊಟ್ಟಿರುತ್ತೇನೆ. ಈಗ ತಮ್ಮ ಮನಸ್ಸನ್ನು ಈ ವಿಷಯವನ್ನು ಚರ್ಚಿಸಲು ಅವಕಾಶ ನೀಡಲು ತಮ್ಮ ಒಲಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ, ರಾಜ್ಯದಲ್ಲಿ ಸತತವಾಗಿ ಕಳೆದ ೪-೫ ವರ್ಷಗಳಿಂದಲೂ ಭೀಕರ ಬರಗಾಲವಿದ್ದು ಈಗ ಕೆಲವು ದಿವಸಗಳಿಂದ ಮಳೆಯಾಗುತ್ತಿದೆ. ಖುಷ್ಕಿ ಭೂಮಿಯಲ್ಲಿ, ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಇನ್ನು ೫-೬ ದಿವಸಗಳಲ್ಲಿ ಬಿತ್ತನೆ ಕೆಲಸ ಪ್ರಾರಂಭಿಸುವ ಮಟ್ಟದಲ್ಲಿ ರೈತರಿದ್ದಾರೆ ಆದರೆ, ಕೃಷಿ ಇಲಾಖೆಯಲ್ಲಿ ಬಿತ್ತನೆಗೆ ಯೋಗ್ಯವಾದ ಡಿ.ಸಿ.ಹೆಚ್. ಹತ್ತಿ ಬೀಜ, ಜೋವಾರ್, ಸೂರ್ಯಕಾಂತಿ ಬೀಜ ಅಗತ್ಯಕ್ಕೆ ಬೇಕಾದಷ್ಟು ಇಲ್ಲದೇ ಬಿತ್ತನೆ ಕಾರ್ಯಕ್ಕೆ ತೊಂದರೆಯಾಗಿದೆ. ಹೋದವರ್ಷ ಡಿ.ಸಿ.ಹೆಚ್. ಹತ್ತಿ ಬೆಳೆಗೆ ಒಳ್ಳೆಯ ಬೆಲೆ ಸಿಕ್ಕಿದ್ದರಿಂದ, ಹತ್ತಿ ಬಿತ್ತನೆ ಕಾರ್ಯವನ್ನು ರೈತರು ಪ್ರಾರಂಭಿಸುತ್ತಾರೆ. ದಾವಣಗೆರೆ ಮತ್ತಿತರೆ ಕಡೆಗಳಲ್ಲಿ ಬೀಜ ನಿಗಮದಿಂದ ರೈತರಿಗೆ ಬೀಜಗಳನ್ನು ಬೆಳೆಸುವಂತಹ ಪ್ರಯತ್ನ ಮಾಡಿದ್ದಾರೆ. ನನಗೆ ತಿಳಿದಿರುವ ಮಾಹಿತಿ ಪ್ರಕಾರ ಕೃಷಿ ಇಲಾಖೆಯವರು, ಬೀಜ ನಿಗಮದವರು, ಬೀಜಗಳನ್ನು ಬೆಳೆದಂತಹ ರೈತರು ಶಾಮೀಲಾಗಿ ಬೀಜ ನಿಗಮಕ್ಕೆ ಬೀಜಗಳನ್ನು ಕೊಡದೆ ಇವತ್ತು ರೈತರಿಗೆ ತೊಂದರೆಗೆ ಕಾರಣವಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿಂತೂ ಶಿಕಾರಿಪುರ ತಾಲ್ಲೂಕಿನಲ್ಲಿ ೧೫೦ ಕ್ವಿಂಟಾಲ್ ಬೀಜದ ಅವಶ್ಯಕತೆ ಇದ್ದರೆ ಕೇವಲ ೫೦ ಕ್ವಿಂಟಾಲ್ ಬೀಜವನ್ನು